# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POSTS OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CIVIL LAW
ದಿವಾಣಿ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 13.04.2019**
ದಿನಾಂಕ: 13ನೇ ಏಪ್ರಿಲ್ 2019

**Max. Marks: 150**
ಗರಿಷ್ಠ ಅಂಕಗಳು: 150

**TIME: 10.00 am to 1.00 pm**
ಸಮಯ: ಬೆಳಗ್ಗೆ 10.00 ರಿಂದ ಮಧ್ಯಾಹ್ನ 1.00 ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) *The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:*

*Main Examination:*
*The Competitive Written Examination for recruitment of District Judges shall consist of:-*

(i) *Written Examination of two papers each of three hours duration with 150 maximum marks of each paper-one in Civil Law and another in Criminal Law.*

(ii) *It is compulsory for all candidates to answer atleast one of the paper in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.*

*1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:*

ಮುಖ್ಯ ಪರೀಕ್ಷೆ:
ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-

(i) ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.

(ii) ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಟ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.

*2) If there is any difference in the question in English language and Kannada language, the question framed in English language shall prevail.*

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

*3). Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

*4)* **ALL QUESTIONS ARE COMPULSORY**

ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿದೆ

**1. Frame the issues and write a judgment on the following facts:** **30 Marks**
**30 ಅಂಕಗಳು**

**ಕೆಳಗಿನ ಸಂಗತಿಗಳ ಮೇಲೆ ವಿವಾದಾಂಶಗಳನ್ನು ರೂಪಿಸಿರಿ ಮತ್ತು ತೀರ್ಪು ಬರೆಯಿರಿ:**

*Note: a) The facts should be stated in brief and not reproduced verbatim*
ಸಂಗತಿಗಳನ್ನು ಸಂಕ್ಷಿಪ್ತವಾಗಿ ಹೇಳತಕ್ಕದ್ದು ಮತ್ತು ಶಬ್ದಶಃ ಪುನರುತ್ಪಾದನೆ ಮಾಡಬಾರದು

*b) It should be presumed that necessary witnesses have been examined to support the case.*

*ಪ್ರಕರಣವನ್ನು ಸಮರ್ಥಿಸುವ ಎಲ್ಲಾ ಅಗತ್ಯ ಸಾಕ್ಷಿಗಳನ್ನು ವಿಚಾರಣೆ ಮಾಡಿದ್ದಾರೆಂದು ಭಾವಿಸತಕ್ಕದ್ದು.*

*c) That necessary and relevant documents have been produced.*

*ಅಗತ್ಯ ಮತ್ತು ಸುಸಂಬದ್ಧ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ.*

It is the case of the plaintiff that he is the owner in possession of an agricultural land bearing Survey No.86 admeasuring 2 acres 30 guntas situated within the local limits of Nandipura Taluk, Gangaram District. He claims that it is his ancestral property. The defendant's land bearing Survey No.85 admeasuring 3 acres 15 guntas is situated on northern side of plaintiff's land. He has further alleged that the defendant has no manner of right in the suit land. On 05.11.2018, when the plaintiff got the suit land measured, it was noticed that the defendant has encroached the suit land to the extent of 24 guntas from northern side. The plaintiff requested the defendant to remove the encroachment. But the defendant refused to do so. Hence, the plaintiff is constrained to file this suit for removal of encroachment and delivery of possession of encroached portion.

The defendant has filed his written statement and denied the case of the plaintiff and contended that the alleged encroached portion is part and parcel of his land bearing Survey No.85. He is the lawful owner in possession of the same. He has not encroached any portion of the land of the plaintiff. In the alternative, the defendant has contended that he has been in continuous, open and peaceful possession and enjoyment of the alleged encroached portion of the suit land since more than 25 years to the knowledge of the plaintiff and hence, he has become owner of the alleged

encroached portion of the suit land by way of adverse possession. He has further contended that the suit is barred by limitation. Hence, the plaintiff's suit is liable to be dismissed with costs.

ಗಂಗಾರಾಂ ಜಿಲ್ಲೆಯ ನಂದಿಪುರ ತಾಲೂಕಿನ ಸ್ಥಳೀಯ ವ್ಯಾಪ್ತಿಯಲ್ಲಿ ಇರುವ ಸರ್ವೆ ನಂ.86ರಲ್ಲಿ 2 ಎಕರೆ 30 ಗುಂಟೆ ಕೃಷಿ ಜಮೀನಿಗೆ ವಾದಿಯು ಮಾಲೀಕನಾಗಿ ಅದರಲ್ಲಿ ಸ್ವಾಧೀನದಲ್ಲಿದ್ದಾನೆಂದು ವಾದಿಯ ವಾದವಾಗಿದೆ. ಅದು ಅವನ ಪಿತ್ರಾರ್ಜಿತ ಅಸ್ತಿ ಎಂದು ಹಕ್ಕೊತ್ತಾಯ ಮಾಡುತ್ತಿದ್ದಾನೆ. ವಾದಿಯ ಜಮೀನಿನ ಉತ್ತರ ದಿಕ್ಕಿನಲ್ಲಿ ಪ್ರತಿವಾದಿಗೆ ಸೇರಿದ ಸರ್ವೆ ನಂ.85ರಲ್ಲಿ 3 ಎಕರೆ 15 ಗುಂಟೆ ಜಮೀನಿದೆ. ದಾವಾ ಜಮೀನಿನಲ್ಲಿ ಪ್ರತಿವಾದಿಗೆ ಯಾವ ವಿಧವಾದ ಹಕ್ಕು ಇರುವುದಿಲ್ಲ ಎಂದು ಅವನು ಮುಂದುವರೆದು ಹೇಳುತ್ತಿದ್ದಾನೆ. 5.11.2018ರಂದು ವಾದಿಯು ದಾವಾ ಜಮೀನನ್ನು ಮೋಜಣಿ ಮಾಡಿದಾಗ ಪ್ರತಿವಾದಿ ದಾವಾ ಜಮೀನಿನ ಉತ್ತರ ದಿಕ್ಕಿನಲ್ಲಿ 24 ಗುಂಟೆ ವಿಸ್ತೀರ್ಣವನ್ನು ಒತ್ತುವರಿ ಮಾಡಿದ್ದಾನೆಂದು ಕಂಡು ಬಂತು. ಆ ಒತ್ತುವರಿಯನ್ನು ತೆರವುಗೊಳಿಸಲು ವಾದಿಯು ಪ್ರತಿವಾದಿಯನ್ನು ವಿನಂತಿಸಿಕೊಂಡಿರುತ್ತಾನೆ. ಆದರೆ ಪ್ರತಿವಾದಿ ಹಾಗೆ ಮಾಡಲು ನಿರಾಕರಿಸಿರುತ್ತಾನೆ. ಆದ್ದರಿಂದ ಒತ್ತುವರಿಯನ್ನು ತೆರವುಗೊಳಿಸಲು ಮತ್ತು ಒತ್ತುವರಿ ಭಾಗದ ಸ್ವಾಧೀನವನ್ನು ಬಿಟ್ಟುಕೊಡಲು ವಾದಿಯು ಈ ದಾವೆಯನ್ನು ಮಾಡಬೇಕಾಯಿತು.

ಪ್ರತಿವಾದಿಯು ಪ್ರತಿದಾವಾ ಪತ್ರವನ್ನು ಸಲ್ಲಿಸಿರುತ್ತಾನೆ ಮತ್ತು ವಾದಿಯ ವಾದವನ್ನು ನಿರಾಕರಿಸಿರುತ್ತಾನೆ ಮತ್ತು ಹೇಳಲ್ಪಟ್ಟ ಒತ್ತುವರಿ ಭಾಗವು ಅವನ ಸರ್ವೆ ನಂ.85ರ ಜಮೀನಿನ ಅವಿಭಾಜ್ಯ ಅಂಗವಾಗಿದೆ ಎಂದು ಹೇಳುತ್ತಾನೆ. ಅವನು ಅದರ ಕಾನೂನುಬದ್ಧ ಮಾಲೀಕನಾಗಿ ಸ್ವಾಧೀನದಲ್ಲಿದ್ದಾನೆ. ಅವನು ವಾದಿ ಜಮೀನಿನ ಯಾವುದೇ ಭಾಗವನ್ನು ಒತ್ತುವರಿ ಮಾಡಿಲ್ಲ. ಅವನು ದಾವಾ ಜಮೀನಿನ ಹೇಳಲ್ಪಟ್ಟ ಒತ್ತುವರಿ ಭಾಗವನ್ನು ಕಳೆದ 25 ವರ್ಷಗಳಿಂದ ವಾದಿಯ ತಿಳುವಳಿಕೆ ಮೇರೆಗೆ ನಿರಂತರ, ಮುಕ್ತ ಮತ್ತು ಶಾಂತಿಯುತ ಸ್ವಾಧೀನ ಮತ್ತು ಅನುಭೋಗದಲ್ಲಿದ್ದಾನೆಂದು ಪರ್ಯಾಯವಾಗಿ ವಾದಿಸುತ್ತಾನೆ. ಆದ್ದರಿಂದ ಅವನು ದಾವಾ ಜಮೀನಿನ ಹೇಳಲ್ಪಟ್ಟ ಒತ್ತುವರಿ ಭಾಗದ ಪ್ರತಿಕೂಲ ಸ್ವಾಧೀನದಲ್ಲಿದ್ದು ಮಾಲೀಕನಾಗಿರುತ್ತಾನೆ. ದಾವೆಯು ಕಾಲಪರಿಮಿತಿಯಿಂದ ಪ್ರತಿಬಂಧಿತವಾಗಿದೆ ಎಂದು ವಾದಿಸುತ್ತಾನೆ. ಆದ್ದರಿಂದ ವಾದಿಯ ದಾವೆಯು ಖರ್ಚು ಸಮೇತ ವಜಾಗೊಳ್ಳಲು ಅರ್ಹವಾಗಿದೆ.

**2 Translate the following passage as extracted from a Judgment to Kannada language:** **15 Marks**
**15 ಅಂಕಗಳು**

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.

The question for consideration is whether the plaintiffs were the absolute owners of the suit properties and whether the Will

executed by Fakirawwa was valid. It is apparent that both the brothers were living separately. They were enjoying their definite shares in the property and after the death of Yellappa, Fakirawwa was enjoying her share in the property. Indeed, evidence of DW-4 shows that he was cultivating the lands that had come to the share of Fakirawwa on her behalf. Thus, material on record including admission made in the cross-examination of PW-1 show that both brothers dealt with their respective shares by alienating the portions out of their respective shares. This makes it very clear that they were enjoying the properties separately. The question whether partition had taken place by metes and bounds in the family does not arise for consideration in this case. The fact remains that property that was enjoyed by the respective parties was dealt with by them and accordingly, Fakirawwa has bequeathed portion in her possession and enjoyment to which she had succeeded upon the death of her husband in favour of defendant Muttanna. Therefore, the claim made by the plaintiffs that they were absolute owners of the properties or that the Will in question was not duly executed by Fakirawwa is not tenable.

**3. Translate the following passage as extracted from a Judgment to English language:** **15 Marks**
15 ಅಂಕಗಳು

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:**

ವ್ಯಕ್ತಿತ್ವದ ಸಂಪೂರ್ಣ ಅಭಿವೃದ್ಧಿ ಹಾಗೂ ಮೂಲಭೂತ ಸ್ವಾತಂತ್ರ್ಯ ಮತ್ತು ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಮಹಿಳೆ ಸಮನಾಗಿ ಪಾಲ್ಗೊಳ್ಳುವುದು, ರಾಷ್ಟ್ರದ ಅಭಿವೃದ್ಧಿಗೆ, ಸಾಮಾಜಿಕ ಮತ್ತು ಕೌಟುಂಬಿಕ ಸ್ಥಿರತೆಗೆ ಮತ್ತು ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಸಹವರ್ತಿಯಾಗಿರುತ್ತದೆ. ಇದು ಹೇಗೆ ಸಾಧಿಸುವುದು. ನಾಗರೀಕತೆ, ಸಂಸ್ಕೃತಿ, ಸಂಪ್ರದಾಯ, ರೂಢಿ, ಧರ್ಮ ಮತ್ತು ಕಾನೂನು ಇವು ಮನುಷ್ಯನ ಉತ್ತಮ ಜೀವನಕ್ಕಾಗಿ ಸಾಮಾಜಿಕ ಬದುಕಿನಲ್ಲಿ ಕಂಡುಬರುತ್ತವೆ. ಮನುಷ್ಯ ಸಮ್ಮತಿಯ ಮೂಲಕ ಸಮುದಾಯದ ಆಜ್ಞೆಯನ್ನು

ಪಾಲಿಸುವನು. ಘರ್ಷಣೆಯನ್ನು ತಡೆಯಲು ಸಮಾಜದಲ್ಲಿ ಕ್ರಮಬದ್ಧತೆಯನ್ನು ತರುವ ಸಲುವಾಗಿ ಕಾನೂನು ನಿಯಮಗಳನ್ನು ರೂಪಿಸಿದೆ. ಪ್ರಜಾಪ್ರಭುತ್ವವು ಕಾನೂನಿನ ಮೂಲಕ ಸಮಾಜದಲ್ಲಿ ರಕ್ತರಹಿತ ಕ್ರಾಂತಿ ಉಂಟು ಮಾಡುತ್ತದೆ. ಸಂಘಟಿತ ಸಮಾಜದಲ್ಲಿ ಯಾವುದೇ ಹಕ್ಕನ್ನು ಪರಿಪೂರ್ಣಗೊಳಿಸುವುದಿಲ್ಲ. ಒಬ್ಬನ ಹಕ್ಕಿನ ಅನುಭವ ಇತರರ ಹಕ್ಕುಗಳ ಅನುಭವಕ್ಕೆ ಸುಸಂಗತವಾಗಿರಬೇಕು. ಸಾಮಾಜಿಕ ಗುಂಪುಗಳು ಮುಕ್ತವಾಗಿ ಬಾಳಲು ಸ್ವಯಂ ಸೌಹಾರ್ದತೆ ತರಲು ಸಾಧ್ಯವಿಲ್ಲ. ರಾಜ್ಯವು ಅಸಮತೋಲನವನ್ನು ಸರಿಪಡಿಸಲು ಹೆಜ್ಜೆ ಇಡಬೇಕು. ರಾಜ್ಯ ನಿರ್ದೇಶಕ ತತ್ವಗಳನ್ನು ಒತ್ತಾಯಪಡಿಸಲಾಗದಿದ್ದರೂ, ಅನುಚ್ಛೇದ 38 ಇದು ಸಾಮಾಜಿಕ ಮತ್ತು ಆರ್ಥಿಕ ಪ್ರಜಾತಂತ್ರವನ್ನು ಪುನರ್ ರಚನೆಗೊಳಿಸಲು ರಾಜ್ಯವನ್ನು ಹೊಣೆಯಾಗಿಸುತ್ತದೆ, ಅಡೆತಡೆಗಳನ್ನು ನಿವಾರಿಸಲು ಹಾಗೂ ಉಯಿಲು ಬರೆಯದಿರುವ ಉತ್ತರಾಧಿಕಾರದ ಸಂದರ್ಭದಲ್ಲಿ ಲಿಂಗಾಧಾರಿತ ತಾರತಮ್ಯ ಮಾಡುವುದನ್ನು ನಿಷೇಧಿಸಲು ನಿರ್ದೇಶನ ನೀಡುತ್ತದೆ.

**4.** 'A' files a suit against 'B'. On the date of hearing, 'B' appears and 'A' does not appear and the suit is dismissed for default. Advise 'A'. **05 Marks** **05 ಅಂಕಗಳು**

'ಎ' ಯು 'ಬಿ' ಯ ವಿರುದ್ಧ ಒಂದು ದಾವೆಯನ್ನು ಮಾಡುತ್ತಾನೆ. ಸುನಾವಣೆಯ ದಿನಾಂಕದಂದು 'ಬಿ' ಯು ಹಾಜರಾಗುತ್ತಾನೆ ಮತ್ತು 'ಎ' ಯು ಗೈರು ಹಾಜರಾಗುತ್ತಾನೆ ಮತ್ತು ದಾವೆಯು ತಪ್ಪುವಿಕೆಯಿಂದ ವಜಾಗೊಳ್ಳುತ್ತದೆ. 'ಎ'ಗೆ ಸಲಹೆ ಕೊಡಿ.

**5.** The defendant offered to sell a house on 25.11.1989 to the plaintiff for Rs.90,000/-. On 10.12.1989, the plaintiff made an offer of Rs.80,000/-. This offer was refused by the defendant on 15.12.1989. On 20.12.1989, the plaintiff wrote to the defendant that he was now prepared to pay Rs.90,000/-. The defendant refused to sell the house. The plaintiff filed a suit against the defendant for breach of contract. How would you decide this case? Explain. **05 Marks** **05 ಅಂಕಗಳು**

25.11.1989ರಂದು ಪ್ರತಿವಾದಿಯು ವಾದಿಗೆ ಒಂದು ಮನೆಯನ್ನು ರೂ.90,000/–ಕ್ಕೆ ಮಾರಾಟ ಮಾಡುತ್ತೇನೆಂದು ಪ್ರಸ್ತಾವನೆಯನ್ನು ಕೊಡುತ್ತಾನೆ. 10.12.1989ರಂದು ವಾದಿಯು ರೂ.80,000/–ಕ್ಕೆ ಪ್ರಸ್ತಾವನೆಯನ್ನು ಮಾಡುತ್ತಾನೆ. ಈ ಪ್ರಸ್ತಾವನೆಯನ್ನು ಪ್ರತಿವಾದಿ 15.12.1989 ರಂದು ನಿರಾಕರಿಸುತ್ತಾನೆ. ಅವನು ಈಗ ರೂ.90,000/– ಪಾವತಿ ಮಾಡಲು ತಯಾರಿದ್ದಾನೆಂದು ಹೇಳಿ ಪ್ರತಿವಾದಿಗೆ ವಾದಿಯು 20.12.1989ರಂದು ಪತ್ರ ಬರೆಯುತ್ತಾನೆ. ಪ್ರತಿವಾದಿಯು ಮನೆಯನ್ನು ಮಾರಾಟ ಮಾಡಲು ನಿರಾಕರಿಸುತ್ತಾನೆ. ಕರಾರಿನ ಉಲ್ಲಂಘನೆಯಾಗಿದೆಯೆಂದು ವಾದಿಯು ಪ್ರತಿವಾದಿಯ ವಿರುದ್ಧ ದಾವೆಯನ್ನು ಹೂಡುತ್ತಾನೆ. ನೀವು ಈ ಮೊಕದ್ದಮೆಯನ್ನು ಹೇಗೆ ತೀರ್ಮಾನ ಮಾಡುತ್ತೀರಿ? ವಿವರಿಸಿ.

**6.** A money decree was passed on 30.7.1968. The appellate court confirmed it on 17.10.1969 and no stay was applied for during the pendency of appeal. Execution application was filed on 30.4.1981. The judgment debtor had contended that it was barred by time as **05 Marks** **05 ಅಂಕಗಳು**

the limitation period prescribed for its execution by Article 136 of the Limitation Act, 1963 was 12 years from the date "when the decree becomes enforceable". Decide with reasons whether the Execution Application is barred by time or not.

30.7.1968ರಂದು ಹಣದ ಡಿಕ್ರಿಯನ್ನು ಮಾಡುತ್ತಾರೆ. 17.10.1969ರಂದು ಮೇಲ್ಮನವಿ ನ್ಯಾಯಾಲಯದಲ್ಲಿ ಅದು ಸ್ಥಿರೀಕೃತವಾಗುತ್ತದೆ ಮತ್ತು ಆ ಮೇಲ್ಮನವಿ ಚಾಲ್ತಿಯಲ್ಲಿರುವಾಗ ತಡೆಯಾಜ್ಞೆಗೆ ಅರ್ಜಿ ಸಲ್ಲಿಸಿರುವುದಿಲ್ಲ. 30.4.1981ರಂದು ಅಮಲ್ಜಾರಿ ಅರ್ಜಿಯನ್ನು ಸಲ್ಲಿಸಲಾಗಿದೆ. ಕಾಲಪರಿಮಿತಿ ಅಧಿನಿಯಮ, 1963ರಂತೆ ಅಮಲ್ಜಾರಿಗೊಳಿಸಲು ಕಾಲಪರಿಮಿತಿ ಅವಧಿಯು 'ಡಿಕ್ರಿ ಜಾರಿಗೊಳಿಸಬಹುದಾದ' ದಿನಾಂಕದಿಂದ 12 ವರ್ಷಗಳು ಎಂದು ನಿಗದಿ ಪಡಿಸಿದ್ದರಿಂದ ಅದು ಕಾಲಪರಿಮಿತಿಯಿಂದ ಪ್ರತಿಬಂಧಿತವಾಗಿದೆಯೆಂದು ತೀರ್ಪುಋಣಿ ವಾದಿಸಿರುತ್ತಾನೆ. ಅಮಲ್ಜಾರಿ ಅರ್ಜಿ ಕಾಲಪರಿಮಿತಿಯಿಂದ ಪ್ರತಿಬಂಧಿತವಾಗಿದೆಯೇ ಅಥವಾ ಇಲ್ಲವೇ ಎಂದು ಕಾರಣ ಸಹಿತ ತೀರ್ಮಾನಿಸಿ.

**7.** 'A' being a tenant of a house is evicted by 'B' with the help of police claiming that he has purchased the house and 'A' is a trespasser. 'A' approached the Deputy Commissioner of the District, who does not help. Then, he approached the Superintendent of police, who does not help. He spent more than a year before these two authorities. He then files a suit in a Civil Court, having jurisdiction, praying for restoration of possession. What is he required to establish to get a relief? Would it make any difference if he had instituted the suit immediately on being dispossessed instead of moving the Deputy Commissioner and the Superintendent of Police? Discuss and explain. **05 Marks** **05 ಅಂಕಗಳು**

'ಎ' ಯು ಒಂದು ಮನೆಯ ಬಾಡಿಗೆದಾರನಾಗಿದ್ದು ಆ ಮನೆಯನ್ನು ತಾನು ಖರೀದಿ ಮಾಡಿದ್ದೇನೆಂದು ಮತ್ತು 'ಎ' ಯು ಅತಿಕ್ರಮಣದಾರ ಎಂದು ಹೇಳಿಕೊಂಡು 'ಬಿ' ಯು ಪೋಲೀಸರ ಸಹಾಯದಿಂದ 'ಎ' ಯನ್ನು ಮನೆಯಿಂದ ಖಾಲಿ ಮಾಡಿಸುತ್ತಾನೆ. 'ಎ' ಯು ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಭೇಟಿ ಮಾಡುತ್ತಾನೆ, ಅವರು ಆತನಿಗೆ ಸಹಾಯ ಮಾಡುವುದಿಲ್ಲ. ನಂತರ ಅವನು ಪೋಲೀಸ್ ವರಿಷ್ಠಾಧಿಕಾರಿಯವರನ್ನು ಭೇಟಿ ಮಾಡುತ್ತಾನೆ, ಅವರೂ ಸಹಾಯ ಮಾಡುವುದಿಲ್ಲ. ಈ ಎರಡೂ ಪ್ರಾಧಿಕಾರದ ಮುಂದೆ ಒಂದು ವರ್ಷ ಮೇಲ್ಪಟ್ಟು ಸಮಯ ಕಳೆಯುತ್ತಾನೆ. ನಂತರ ಅಧಿಕಾರ ವ್ಯಾಪ್ತಿಯುಳ್ಳ ಸಿವಿಲ್ ನ್ಯಾಯಾಲಯದಲ್ಲಿ ಸ್ವಾಧೀನ ಪುನಃಸ್ಥಾಪಿಸಲು ಕೋರಿ ದಾವೆ ಮಾಡುತ್ತಾನೆ. ಪರಿಹಾರ ಪಡೆಯಲು ಏನು ಸ್ಥಾಪಿಸಬೇಕಾದ ಅವಶ್ಯಕತೆ ಇದೆ? ಜಿಲ್ಲಾಧಿಕಾರಿ ಮತ್ತು ಪೋಲೀಸ್ ವರಿಷ್ಠಾಧಿಕಾರಿಯವರ ಬಳಿ ಹೋಗುವ ಬದಲು ಸ್ವಾಧೀನ ಕಳೆದುಕೊಂಡ ಕೂಡಲೆ ಅವನು ದಾವೆಯನ್ನು ದಾಖಲಿಸಿದ್ದರೆ ಏನಾದರು ವ್ಯತ್ಯಾಸ ಆಗುತ್ತಿತ್ತೇ? ಚರ್ಚಿಸಿ ಮತ್ತು ವಿವರಿಸಿ.

**8.** Distinguish between a contract of Indemnity and a contract of guarantee. **10 Marks** **10 ಅಂಕಗಳು**

ನಷ್ಟ ಪರಿಹಾರ ಒಪ್ಪಂದ ಮತ್ತು ಖಾತರಿ ಒಪ್ಪಂದ ಇವುಗಳ ಮಧ್ಯೆ ಇರುವ ವಿಭಿನ್ನತೆಯನ್ನು ತಿಳಿಸಿ.

**9.** Constituent power to frame the constitution and the constituent power to amend the constitution have different connotation and scope. Explain. **10 Marks** 10 ಅಂಕಗಳು

ಸಂವಿಧಾನವನ್ನು ರಚಿಸಲು ಇರುವ ಸಂವಿಧಾನಾಧಿಕಾರ ಮತ್ತು ಸಂವಿಧಾನವನ್ನು ತಿದ್ದುಪಡಿ ಮಾಡಲು ಇರುವ ಸಂವಿಧಾನಾಧಿಕಾರಗಳಿಗೆ ಬೇರೆ ಬೇರೆ ಅಧಿಕಾರ್ಥವಿದೆ ಮತ್ತು ವ್ಯಾಪ್ತಿಯಿದೆ. ವಿವರಿಸಿ

**10.** The Governor of a State holds office during the 'pleasure' of the President of India. Can he be removed by the President at any time without any reason? Discuss. **10 Marks** 10 ಅಂಕಗಳು

ರಾಜ್ಯದ ರಾಜ್ಯಪಾಲರು ಭಾರತದ ರಾಷ್ಟ್ರಪತಿಯವರ 'ಇಷ್ಟಪರ್ಯಂತ' ಪದದಲ್ಲಿರತಕ್ಕದು. ಕಾರಣವಿಲ್ಲದೆ ರಾಷ್ಟ್ರಪತಿಯವರು ಯಾವುದೇ ಸಮಯದಲ್ಲಿ ಅವರನ್ನು ರಾಜ್ಯಪಾಲರ ಹುದ್ದೆಯಿಂದ ತೆಗೆದುಹಾಕಬಹುದೇ? ಚರ್ಚಿಸಿ.

**11.** What are the conditions for determination of a lease under the Transfer of Property Act, 1882? **10 Marks** 10 ಅಂಕಗಳು

ಆಸ್ತಿ ವರ್ಗಾವಣೆ ಅಧಿನಿಯಮ, 1882ರಡಿಯಲ್ಲಿ ಗೇಣಿಯನ್ನು ಕೊನೆಗೊಳಿಸಲು ಇರುವ ಷರತ್ತುಗಳು ಯಾವುವು?

**12.** In which cases, secondary evidence relating to documents can be given? In what manner? Discuss. **10 Marks** 10 ಅಂಕಗಳು

ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ದ್ವಿತೀಯಕ ಸಾಕ್ಷ್ಯವನ್ನು ಯಾವ ಮೊಕದ್ದಮೆಗಳಲ್ಲಿ ಕೊಡಬಹುದು? ಯಾವ ರೀತಿಯಲ್ಲಿ? ಚರ್ಚಿಸಿ.

**13.** How can acknowledgement result in the extension of limitation period? Discuss. **10 Marks** 10 ಅಂಕಗಳು

ಕಾಲಪರಿಮಿತಿಯನ್ನು ವಿಸ್ತರಣೆ ಮಾಡುವಲ್ಲಿ ಸ್ವೀಕೃತಿ ಹೇಗೆ ಪರಿಣಾಮ ಬೀರಬಹುದು? ಚರ್ಚಿಸಿ.

**14.** Discuss the grounds for setting aside an arbitral award as enumerated under the Arbitration and Conciliation Act, 1996. **10 Marks** 10 ಅಂಕಗಳು

ಮಧ್ಯಸ್ತಿಕೆ ಮತ್ತು ಸಂಧಾನ ಕಾಯಿದೆ, 1996ರಡಿಯಲ್ಲಿ ಹೇಳಿದಂತೆ ಮಧ್ಯಸ್ತಿಕೆ ಐತೀರ್ಪನ್ನು ರದ್ದುಪಡಿಸಲು ಇರುವ ಕಾರಣಗಳನ್ನು ಚರ್ಚಿಸಿ.

--------

# HIGH COURT OF KARNATAKA
ಕರ್ನಾಟಕ ಉಚ್ಚ ನ್ಯಾಯಾಲಯ

## MAIN WRITTEN EXAMINATION FOR RECRUITMENT TO THE POSTS OF DISTRICT JUDGES
ಜಿಲ್ಲಾ ನ್ಯಾಯಾಧೀಶರುಗಳ ಹುದ್ದೆಗಳ ನೇಮಕಾತಿಯ ಮುಖ್ಯ ಲಿಖಿತ ಪರೀಕ್ಷೆ

## CRIMINAL LAW
ಅಪರಾಧಿಕ ಕಾನೂನು

## QUESTION PAPER
ಪ್ರಶ್ನೆ ಪತ್ರಿಕೆ

**Date: 13.04.2019**
ದಿನಾಂಕ: 13ನೇ ಏಪ್ರಿಲ್ 2019

**Max. Marks: 150**
ಗರಿಷ್ಠ ಅಂಕಗಳು: 150

**TIME: 2.30 pm to 5.30 pm**
ಸಮಯ: ಮಧ್ಯಾಹ್ನ 2.30 ರಿಂದ 5.30 ಘಂಟೆ

**INSTRUCTIONS TO CANDIDATES:**
ಅಭ್ಯರ್ಥಿಗಳಿಗೆ ಸೂಚನೆಗಳು

1) *The candidates should note Rule 5(b) of the Karnataka Judicial Service (Recruitment) (Amendment) Rules, 2016 that reads as under:*
*Main Examination:*
*The Competitive Written Examination for recruitment of District Judges shall consist of:-*

(i) *Written Examination of two papers each of three hours duration with 150 maximum marks of each paper-one in Civil Law and another in Criminal Law.*

(ii) *It is compulsory for all candidates to answer atleast one of the paper in English language and in so far as the other paper is concerned, it shall be optional for the candidates to answer the same either in English or in Kannada in which event the said paper shall be answered entirely in the language in which option is exercised.*

*1) ಕರ್ನಾಟಕ ನ್ಯಾಯಿಕ ಸೇವಾ (ನೇಮಕಾತಿ) (ತಿದ್ದುಪಡಿ) ನಿಯಮಗಳು 2016ರ ನಿಯಮ 5(ಬಿ)ಯನ್ನು ಈ ಕೆಳಗಿನಂತೆ ಓದಲಾಗುವುದು ಎಂದು ಅಭ್ಯರ್ಥಿಗಳು ಗಮನಿಸತಕ್ಕದ್ದು:*

ಮುಖ್ಯ ಪರೀಕ್ಷೆ:

ಜಿಲ್ಲಾ ನ್ಯಾಯಾಧೀಶರ ನೇಮಕಾತಿಯಲ್ಲಿ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯು ಒಳಗೊಂಡಿದ್ದು:-

(i) ಲಿಖಿತ ಪರೀಕ್ಷೆಯು ಎರಡು ಪತ್ರಿಕೆಯದಾಗಿದ್ದು ತಲಾ ಮೂರು ಗಂಟೆ ಅವಧಿಯ ಪ್ರತಿ ಪತ್ರಿಕೆಯು 150 ಗರಿಷ್ಠ ಅಂಕಗಳು ಉಳ್ಳದ್ದು – ಒಂದು ದಿವಾಣಿ ಕಾನೂನು ಮತ್ತೊಂದು ಅಪರಾಧಿಕ ಕಾನೂನುದಾಗಿರುತ್ತದೆ.

(ii) ಎಲ್ಲಾ ಅಭ್ಯರ್ಥಿಗಳು ಕಡ್ಡಾಯವಾಗಿ ಕನಿಷ್ಠ ಪಕ್ಷ ಒಂದು ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಉತ್ತರಿಸಬೇಕಾಗುವುದು ಮತ್ತು ಮತ್ತೊಂದು ಪತ್ರಿಕೆಗೆ ಸಂಬಂಧಿಸಿದಂತೆ ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸುವುದನ್ನು ಅಭ್ಯರ್ಥಿಗಳ ಆಯ್ಕೆಗೆ ಬಿಡಲಾಗಿದೆ, ಆ ಸಂದರ್ಭದಲ್ಲಿ ಆ ಪತ್ರಿಕೆಯನ್ನು ಪೂರ್ತಿ ಆಯ್ಕೆ ಮಾಡಿದ ಭಾಷೆಯಲ್ಲಿ ಉತ್ತರಿಸತಕ್ಕದ್ದು.

*2) If there is any difference in the question in English language and Kannada language, the question framed in English language shall prevail.*

ಒಂದು ವೇಳೆ ಪ್ರಶ್ನೆಗಳಲ್ಲಿ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ನಡುವೆ ವ್ಯತ್ಯಾಸ ಕಂಡುಬಂದಲ್ಲಿ ಆಂಗ್ಲ ಭಾಷೆಯಲ್ಲಿ ಮುದ್ರಿಸಿರುವ ಪ್ರಶ್ನೆಯು ಪ್ರಭಾವವುಳ್ಳದ್ದಾಗುತ್ತದೆ.

*3) Write your register number only on the cover page in the space provided and nowhere else. You must not write your name or make any kind of marks disclosing your identity on any part of your answer book or additional answer book. Contravention of the above instruction will entail disqualification.*

ನಿಮ್ಮ ರಿಜಿಸ್ಟರ್ ನಂಬರನ್ನು ಕವರ್ ಪುಟದಲ್ಲಿ ಒದಗಿಸಿದ ಜಾಗದಲ್ಲಿ ಮಾತ್ರ ಬರೆಯಬೇಕು, ಬೇರೆ ಎಲ್ಲಿಯೂ ಬರೆಯಬಾರದು. ನಿಮ್ಮ ಗುರುತನ್ನು ಬಹಿರಂಗಪಡಿಸುವಂತೆ ಉತ್ತರ ಪತ್ರಿಕೆಯಲ್ಲಾಗಲಿ ಅಥವಾ ಹೆಚ್ಚುವರಿ ಉತ್ತರ ಪತ್ರಿಕೆಯಲ್ಲಾಗಲಿ ನಿಮ್ಮ ಹೆಸರನ್ನು ಬರೆಯಬಾರದು ಅಥವಾ ಯಾವುದೇ ಗುರುತನ್ನು ಮಾಡಬಾರದು. ಈ ಮೇಲಿನ ಸೂಚನೆ ಉಲ್ಲಂಘಿಸಿದರೆ ನೀವು ಅನರ್ಹತೆಗೆ ಗುರಿಯಾಗುತ್ತೀರಿ.

*4) **ALL QUESTIONS ARE COMPULSORY***

ಎಲ್ಲಾ ಪ್ರಶ್ನೆಗಳು ಕಡ್ಡಾಯವಾಗಿದೆ

**1. Write a judgment on the following facts after mentioning bare necessary facts and presuming that necessary witnesses have been examined by the prosecution.** **30 Marks** **30 ಅಂಕಗಳು**

ಅಗತ್ಯವಾದ ಸಂಗತಿಗಳನ್ನು ನಮೂದಿಸಿದ ನಂತರ ಅಭಿಯೋಜನೆಯು ಅಗತ್ಯವಾದ ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದಾರೆಂದು ಭಾವಿಸಿಕೊಂಡು ಈ ಕೆಳಕಂಡ ಸಂಗತಿಗಳ ಮೇಲೆ ತೀರ್ಪನ್ನು ಬರೆಯಿರಿ.

The case of the prosecution is that on 20th May, 2018 at about 4.00 p.m., an altercation took place between Raju and Ganesha on

the one hand and Accused No.1 Naveen D'Souza on the other. The altercation was followed by Raju slapping the Accused No.1. This incident took place at 4.00 p.m. Later at 9.00 p.m., when Raju and Ganesha closed their shop and left for their house on a scooter driven by Ganesha, the Accused No.1 along with Accused No.2 Ravindra accosted them on the way. Ravindra hit the scooter with an iron rod as a result of which Raju and Ganesha fell down. Thereafter the Accused No.1 is said to have stabbed Raju with a knife on his abdomen. Raju was taken to the hospital. On the basis of the first information given by Ganesha, the Rajarajeshwari Nagar police registered a case in Cr.No.30/18 against Accused No.1 and the case was investigated. A charge sheet was filed for the offence punishable under Section 307 of the Indian Penal Code against Accused No.1 and 2. On filing the charge sheet, Accused No.1 and 2 are tried by you as a Sessions Judge.

Learned Public Prosecutor has argued that the prosecution has examined PW1 Ganesha (first informant), PW2 Raju (injured), Spot Mahazar witness Ramachandra as PW3, Medical Officer Dr.Devendra as PW4, seizure mahazar witness Kempa as PW5, Investigating Officer Narasimha as PW6. He has argued that the police have recovered the weapon of offence namely a knife at the instance of Accused No.1. He has argued that on chemical examination, it was found that the knife had human blood on it of 'AB' Group, which was the blood group of the injured.

Learned counsel for the Accused has argued that the prosecution has failed to examine independent eye witnesses and not proved the prosecution case beyond all reasonable doubt. He has argued that the name of Accused No.2 did not find mention in the F.I.R. He has argued that the Accused have been falsely implicated in the above case.

20.5.2018ರಂದು ಸಂಜೆ 4.00 ಗಂಟೆಗೆ ರಾಜು ಮತ್ತು ಗಣೇಶ ಒಂದು ಕಡೆ ಮತ್ತು ಒಂದನೇ ಆರೋಪಿ ನವೀನ್ ಡಿ'ಸೋಜ ಇನ್ನೊಂದು ಕಡೆ ಇದ್ದು ಜಗಳ ಮಾಡಿದ್ದರು ಎನ್ನುವುದು ಅಭಿಯೋಜನೆಯ

ವಾದವಾಗಿದೆ. ಆ ಮಾತಿನ ಜಗಳ ಮುಂದುವರೆದು ರಾಜು ಒಂದನೇ ಆರೋಪಿಗೆ ಹೊಡೆಯುತ್ತಾನೆ. ಈ ಘಟನೆ ಸಂಜೆ 4.00 ಗಂಟೆಗೆ ನಡೆದಿರುತ್ತದೆ. ನಂತರ ರಾತ್ರಿ 9.00 ಗಂಟೆಗೆ ರಾಜು ಮತ್ತು ಗಣೇಶ ಅವರ ಅಂಗಡಿಯನ್ನು ಮುಚ್ಚಿ ಗಣೇಶ ಸ್ಕೂಟರ್ ಚಾಲನೆ ಮಾಡುತ್ತಾ ಅವರು ಮನೆ ಕಡೆಗೆ ಹೋಗುವಾಗ ಒಂದನೇ ಆರೋಪಿ ಎರಡನೇ ಆರೋಪಿಯಾದ ರವೀಂದ್ರನ ಜೊತೆಗೆ ದಾರಿಯಲ್ಲಿ ಹತ್ತಿರ ಬಂದು ಮಾತನಾಡಿಸುತ್ತಾರೆ. ರವೀಂದ್ರನು ಕಬ್ಬಿಣದ ರಾಡಿನಿಂದ ಸ್ಕೂಟರ್‌ಗೆ ಬಡಿಯುತ್ತಾನೆ, ಈ ಪರಿಣಾಮ ರಾಜು ಮತ್ತು ಗಣೇಶ ಕೆಳಗೆ ಬೀಳುತ್ತಾರೆ. ಆ ನಂತರ ಒಂದನೇ ಆರೋಪಿಯು ಚಾಕುವಿನಿಂದ ರಾಜುವಿನ ಹೊಟ್ಟೆಗೆ ಚುಚ್ಚಿದನೆಂದು ಹೇಳುತ್ತಾರೆ. ರಾಜುವನ್ನು ಆಸ್ಪತ್ರೆಗೆ ಕೊಂಡೊಯ್ಯುತ್ತಾರೆ. ಗಣೇಶ ಕೊಟ್ಟ ಪ್ರಥಮ ಮಾಹಿತಿ ಮೇರೆಗೆ ರಾಜರಾಜೇಶ್ವರಿ ನಗರ ಪೋಲೀಸರು ಕ್ರೈಂ ನಂ.30/18ರಲ್ಲಿ ಒಂದನೇ ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುತ್ತಾರೆ. ಭಾರತ ದಂಡ ಸಂಹಿತೆಯ ಕಲಂ 307ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧಕ್ಕಾಗಿ ಒಂದು ಮತ್ತು ಎರಡನೇ ಆರೋಪಿತರ ವಿರುದ್ಧ ದೋಷಾರೋಪಣ ಪತ್ರವನ್ನು ಸಲ್ಲಿಸುತ್ತಾರೆ. ದೋಷಾರೋಪಣ ಪತ್ರ ಸಲ್ಲಿಸಿದ ನಂತರ ಒಂದು ಮತ್ತು ಎರಡನೇ ಆರೋಪಿಗಳನ್ನು ನೀವು ಸೆಷನ್ಸ್ ನ್ಯಾಯಾಧೀಶರಾಗಿ ಅಧಿವಿಚಾರಣೆಗೆ ಒಳಪಡಿಸುತ್ತೀರಿ.

ಮಾನ್ಯ ಸರ್ಕಾರಿ ಅಭಿಯೋಜಕರು ತನ್ನ ವಾದವನ್ನು ಮಂಡಿಸುತ್ತ ಅಭಿಯೋಜನೆ ಪ್ರಾ.ಸಾ.1 ಗಣೇಶ (ಪ್ರಥಮ ಮಾಹಿತಿದಾರ), ಪ್ರಾ.ಸಾ.2 ರಾಜು (ಗಾಯಾಳು), ಸ್ಥಳ ಪಂಚನಾಮೆ ಸಾಕ್ಷಿ ರಾಮಚಂದ್ರ ಪ್ರಾ.ಸಾ.3 ಎಂದು, ವೈದ್ಯಾಧಿಕಾರಿ ಡಾ.ದೇವೇಂದ್ರ ಪ್ರಾ.ಸಾ4 ಎಂದು, ಜಪ್ತ ಪಂಚನಾಮೆ ಸಾಕ್ಷಿ ಕೆಂಪ ಪ್ರಾ.ಸಾ5 ಎಂದು, ತನಿಖಾಧಿಕಾರಿ ನರಸಿಂಹ ಪ್ರಾ.ಸಾ.6 ಎಂದು ಸಾಕ್ಷಿ ವಿಚಾರಣೆ ಮಾಡಿರುತ್ತಾರೆ. ಒಂದನೇ ಆರೋಪಿಯ ಮುಖಾಂತರ ಪೋಲೀಸರು ಕೃತ್ಯದ ಆಯುಧವನ್ನು ವಶಪಡಿಸಿಕೊಂಡಿದ್ದಾರೆಂದು ಅವರು ವಾದಿಸಿರುತ್ತಾರೆ. ಚಾಕುವಿನಲ್ಲಿ 'ಎಬಿ' ಗುಂಪಿನ ಮಾನವ ರಕ್ತ ಕಂಡು ಬಂದಿದೆ ಎಂದು ರಾಸಾಯನಿಕ ಪರೀಕ್ಷೆಯಿಂದ ಗೊತ್ತಾಗಿದೆ, ಅದು ಗಾಯಾಳುವಿನ ರಕ್ತದ ಗುಂಪು ಎಂದು ಅಭಿಯೋಜಕರು ವಾದಿಸಿರುತ್ತಾರೆ.

ಅಭಿಯೋಜನೆ ಸ್ವತಂತ್ರ ಸಾಕ್ಷಿದಾರರನ್ನು ವಿಚಾರಣೆ ಮಾಡಲು ವಿಫಲವಾಗಿದೆ ಮತ್ತು ಅಭಿಯೋಜನೆ ಸಂಶಯಾತೀತವಾಗಿ ಅಭಿಯೋಜನೆಯ ಪ್ರಕರಣವನ್ನು ರುಜುವಾತು ಮಾಡಿಲ್ಲ ಎಂದು ಆರೋಪಿ ಪರ ವಕೀಲರು ವಾದ ಮಂಡಿಸಿರುತ್ತಾರೆ. ಎರಡನೇ ಆರೋಪಿಯ ಹೆಸರನ್ನು ಪ್ರಥಮ ವರ್ತಮಾನ ವರದಿಯಲ್ಲಿ ನಮೂದಿಸಿಲ್ಲ ಎಂದು ಅವರು ವಾದಿಸಿರುತ್ತಾರೆ. ಆರೋಪಿತರನ್ನು ಪ್ರಕರಣದಲ್ಲಿ ಸುಳ್ಳಾಗಿ ಸಿಲುಕಿಸಿರುತ್ತಾರೆ ಎಂದು ವಾದಿಸಿರುತ್ತಾರೆ.

**2. Translate the following passage as extracted from a Judgment to Kannada language:** **15 Marks** 15 ಅಂಕಗಳು

ಈ ಕೆಳಕಂಡ ತೀರ್ಪಿನ ಭಾಗವನ್ನು ಕನ್ನಡ ಭಾಷೆಗೆ ಅನುವಾದಿಸಿ.

So far as the sentence is concerned, it is submitted by the learned counsel for the appellant that by enhancing the fine

amount, the sentence of imprisonment for the offence under Section 341 IPC may be waived. Taking into consideration the fact that there was an existing rivalry between the parties and that PW1 has sustained simple injuries, I think it would be just and proper to award a fine for both the offences under Sections 323 and 341 IPC. To this extent, the sentence for these offences has to be reduced. In the circumstances, I answer the point partly in the affirmative and partly in the negative and proceed to pass the following:

ORDER

The appeal is allowed in part. The appellant is acquitted of the charge for the offence under Section 3(1)(xi) of the Scheduled Castes and Scheduled Tribes (Prevention of Atrocities) Act, 1989. His conviction for the offences under sections 323 and 341 of IPC is confirmed. However, the sentence is modified. He is ordered to pay a fine of Rs.1,000/- for each of the offences, within a period of two months from this date, in default to undergo simple imprisonment for a period of two months (one month for each of the offences).

**3. Translate the following passage as extracted from a Judgment to English language:** **15 Marks**
15 ಅಂಕಗಳು

**ಈ ಕೆಳಕಂಡ ತೀರ್ಪಿನ ಭಾಗವನ್ನು ಆಂಗ್ಲ ಭಾಷೆಗೆ ಅನುವಾದಿಸಿ:**

ಕಲಂ 167(2)ನೇ ಪರಂತುಕದ ಮೇರೆಗಿನ ಜಾಮೀನು ಮೇಲೆ ಬಿಡುಗಡೆಯಾಗುವ ಆದೇಶವನ್ನು ಸೂಕ್ತವಾಗಿ ತಪ್ಪಿತದ ಬಗೆಗಿನ ಆದೇಶವೆಂಬುದಾಗಿ ಅರ್ಥೈಸಬಹುದು. ನಿಜಕ್ಕೂ, ಇದು ನಿಗದಿತ ಅವಧಿಯೊಳಗೆ ಆರೋಪ ಪಟ್ಟಿಯನ್ನು ದಾಖಲಿಸಲು ಅಭಿಯೋಜನೆ ತಪ್ಪಿದ ಕಾರಣ ಜಾಮೀನಿನ ಮೇಲೆ ಆದ ಬಿಡುಗಡೆ. 167(2)ನೇ ಪ್ರಕರಣದ (ಎ) ಪರಂತುಕದ ಮೇರೆಗೆ ಜಾಮೀನನ್ನು ಪಡೆಯುವ ಹಕ್ಕು ನಿರುಪಾಧಿಕವಾದುದು. ಅದು ಶಾಸನಾತ್ಮಕವಾದ ಆಜ್ಞೆ, ನ್ಯಾಯಾಲಯದ ವಿವೇಚನೆಯಲ್ಲ. ತನಿಖಾ ಏಜೆನ್ಸಿಯು ಸಂದರ್ಭಾನುಸಾರ 90/60 ದಿನಗಳು ಮುಗಿಯುವ ಮೊದಲು ಆರೋಪ ಪಟ್ಟಿಯನ್ನು ದಾಖಲಿಸಲು ತಪ್ಪಿದಲ್ಲಿ, ಬಂಧನದಲ್ಲಿರುವ ಆರೋಪಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು.

ಆದರೆ, ಆ ಹಂತದಲ್ಲಿ, ಪ್ರಕರಣದ ಅರ್ಹತೆಗಳನ್ನು ಪರಿಶೀಲಿಸಬಾರದು. ಪರಿಶೀಲಿಸಲೇಬಾರದು. ವಾಸ್ತವವಾಗಿ, ಒಬ್ಬ ವ್ಯಕ್ತಿಯನ್ನು 90/60 ದಿನಗಳ ಗೊತ್ತುಪಡಿಸಿದ ಅವಧಿಯನ್ನು ಮೀರಿ ಬಂಧನಕ್ಕೆ ಕಳುಹಿಸಲು ಮ್ಯಾಜಿಸ್ಟ್ರೇಟ್‌ರಿಗೆ ಯಾವ ಅಧಿಕಾರವೂ ಇಲ್ಲ. ಅವರು ಜಾಮೀನು ಆದೇಶವನ್ನು ಹೊರಡಿಸಬೇಕು ಮತ್ತು ಆರೋಪಿಗೆ ಅವಶ್ಯ ಜಾಮೀನು ಮುಚ್ಚಳಿಕೆಗಳನ್ನು ಒದಗಿಸಲು ತಿಳಿಸಬೇಕು. ಜಾಮೀನಿನಲ್ಲಿರಲು ಆರೋಪಿಯು ವಿಶೇಷ ಹಕ್ಕನ್ನು ಕೇಳಲು ಬರುವುದಿಲ್ಲ. ಆರೋಪಿಯು ಗಂಭೀರವಾದ ಅಪರಾಧ ಮಾಡಿದ್ದಾನೆಂದು ತನಿಖೆಯಲ್ಲಿ ಬಹಿರಂಗವಾದರೆ ಮತ್ತು ದೋಷಾರೋಪಣ ಪತ್ರವನ್ನು ಸಲ್ಲಿಸಿದರೆ, ಕಲಂ 167(2)ರ ಪರಂತುಕ(ಎ)ಯ ಅಡಿಯಲ್ಲಿ ಮಂಜೂರು ಮಾಡಿದ ಜಾಮೀನನ್ನು ರದ್ದುಗೊಳಿಸಬಹುದು.

**4.** An accused is arrested in a bailable offence and he is released on bail. During the trial, he absconds. A non-bailable warrant is issued against him. The police arrest him and produce him before the court. The defence counsel pleads for his release on bail under Section 436 of the Code of Criminal Procedure, 1973 which provides that a person accused of a bailable offence shall be released on bail. Can the court, in such circumstances, refuse to release him on bail or the Court is bound to release him on bail? Give reasons. **05 Marks** **05 ಅಂಕಗಳು**

ಜಾಮೀನಿಯ ಅಪರಾಧದಲ್ಲಿ ಆರೋಪಿಯನ್ನು ಬಂಧಿಸುತ್ತಾರೆ ಮತ್ತು ಅವನನ್ನು ಜಮೀನಿನ ಮೇಲೆ ಬಿಡುಗಡೆ ಮಾಡುತ್ತಾರೆ. ಅಧಿವಿಚಾರಣೆ ಹಂತದಲ್ಲಿ ಅವನು ತಲೆ ಮರೆಸಿಕೊಳ್ಳುತ್ತಾನೆ. ಜಾಮೀನಿಯವಲ್ಲದ ವಾರೆಂಟನ್ನು ಅವನ ವಿರುದ್ಧ ಹೊರಡಿಸುತ್ತಾರೆ. ಪೋಲಿಸರು ಅವನನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತಾರೆ. ಅಪರಾಧ ಪ್ರಕ್ರಿಯಾ ಸಂಹಿತೆ, 1973ರ ಕಲಂ 436ರಡಿಯಲ್ಲಿ ಜಾಮೀನಿಯ ಅಪರಾಧದ ಆರೋಪ ಹೊತ್ತಿರುವ ವ್ಯಕ್ತಿಯನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕೆಂದು ಉಪಬಂಧಿಸಿರುವುದರಿಂದ ಅವನ ಬಿಡುಗಡೆಗಾಗಿ ಆರೋಪಿ ಪರ ವಕೀಲರು ಕೋರಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಆತನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನ್ಯಾಯಾಲಯ ನಿರಾಕರಿಸಬಹುದೇ ಅಥವಾ ಅವನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲೇ ಬೇಕಾಗಿದೆಯೇ? ಕಾರಣ ಕೊಡಿ.

**5.** 'A' an accused of an offence of murder stated before a police officer that *"I will produce a knife concealed in the roof of my house with which I stabbed 'B'"*. On this information, the police officer discovers the said knife from the house of the accused, on which human blood is detected. Is the whole statement given by the accused admissible in evidence? If not, what part or parts are admissible in evidence? Explain with reference to the Indian Evidence Act, 1872. **05 Marks** **05 ಅಂಕಗಳು**

ಕೊಲೆ ಅಪರಾಧದ ಆರೋಪಿಯಾದ 'ಎ'ಯು ಪೋಲೀಸರ ಮುಂದೆ *"ನಾನು 'ಬಿ' ಗೆ ಚುಚ್ಚಿದ ಚಾಕುವನ್ನು ಮನೆಯ ಚಾವಣಿಯಲ್ಲಿ ಅಡಗಿಸಿಟ್ಟಿದ್ದನ್ನು ಹಾಜರು ಪಡಿಸುತ್ತೇನೆ"* ಎಂದು ಹೇಳುತ್ತಾನೆ. ಈ

ಮಾಹಿತಿಯ ಮೇರೆಗೆ ಪೋಲೀಸರು ಆರೋಪಿ ಮನೆಯಲ್ಲಿ ಆ ಚಾಕುವನ್ನು ಕಂಡು ಹಿಡಿಯುತ್ತಾರೆ ಮತ್ತು ಅದರಲ್ಲಿ ಮಾನವ ರಕ್ತ ಕಂಡು ಬರುತ್ತದೆ. ಆರೋಪಿ ಕೊಟ್ಟ ಪೂರ್ತಿ ಹೇಳಿಕೆಯನ್ನು ಸಾಕ್ಷ್ಯದಲ್ಲಿ ಒಪ್ಪಿಕೊಳ್ಳಬಹುದೇ? ಇಲ್ಲವಾದಲ್ಲಿ, ಯಾವ ಭಾಗ ಅಥವಾ ಭಾಗಗಳನ್ನು ಸಾಕ್ಷ್ಯದಲ್ಲಿ ಒಪ್ಪಿಕೊಳ್ಳಬಹುದು? ಭಾರತ ಸಾಕ್ಷ್ಯ ಅಧಿನಿಯಮ, 1872ರನ್ನು ಉಲ್ಲೇಖಿಸಿ ವಿವರಿಸಿ.

**6.** 'M', an unmarried daughter of 'A' was born on 13.12.1970. Between 13th and 14th December, 1986 at 3 a.m., she goes with her paramour 'B' without her parent's consent or knowledge. After a fortnight, with her consent, 'B' has sexual intercourse with her. What are the offences, if any, committed by 'M' and 'B'? **05 Marks** **05 ಅಂಕಗಳು**

'ಎಂ' ಎಂಬುವಳು 'ಎ' ಎಂಬವರ ಅವಿವಾಹಿತ ಮಗಳಾಗಿದ್ದು 13.12.1970 ರಂದು ಜನಿಸಿರುತ್ತಾಳೆ. 13 ಮತ್ತು 14 ಡಿಸೆಂಬರ್ 1986 ರಂದು ಬೆಳಗ್ಗೆ 3.00 ಗಂಟೆಗೆ ಆಕೆಯು ಹೆತ್ತವರ ಅನುಮತಿ ಮತ್ತು ತಿಳುವಳಿಕೆಗಿಲ್ಲದೆ ತನ್ನ ಪ್ರೇಯಸಿ 'ಬಿ' ಯ ಜೊತೆಗೆ ಹೋಗುತ್ತಾಳೆ. ಹದಿನೈದು ದಿನ ಆದ ಮೇಲೆ ಆಕೆಯ ಒಪ್ಪಿಗೆ ಮೇರೆಗೆ 'ಬಿ' ಯು ಆಕೆಯ ಜೊತೆಗೆ ಲೈಂಗಿಕ ಸಂಭೋಗ ಮಾಡುತ್ತಾನೆ. 'ಎಂ' ಮತ್ತು 'ಬಿ' ಯಾವ ಅಪರಾಧಗಳನ್ನು ಮಾಡಿರುತ್ತಾರೆ?

**7.** The accused was beating 'A' with fists. The wife of 'A' intervened with her baby in arms with a view to rescue her husband. The accused gave a fist blow to her also, which hit the baby. As a result, the baby died. On being prosecuted, the accused pleads "*accident*". Decide with reference to the Indian Penal Code, 1860. **05 Marks** **05 ಅಂಕಗಳು**

ಆರೋಪಿಯು 'ಎ' ಗೆ ಮುಷ್ಟಿಯಿಂದ ಹೊಡೆಯುತ್ತಾನೆ. 'ಎ' ಯ ಹೆಂಡತಿ ತನ್ನ ಕಂಕುಳಲ್ಲಿ ಮಗುವನ್ನು ಹಿಡಿದುಕೊಂಡು ತನ್ನ ಗಂಡನನ್ನು ರಕ್ಷಿಸುವ ಉದ್ದೇಶದಿಂದ ಮಧ್ಯ ಪ್ರವೇಶಿಸುತ್ತಾಳೆ. ಆರೋಪಿ ಆಕೆಗೂ ಮುಷ್ಟಿಯಿಂದ ಏಟು ಕೊಡುತ್ತಾನೆ, ಅದು ಮಗುವಿಗೆ ತಾಗುತ್ತದೆ. ಆ ಕಾರಣದಿಂದ ಮಗು ಸಾಯುತ್ತದೆ. ಅಭಿಯೋಜನೆಗೊಳಿಸಿದಾಗ ಆತನು ಅದು "*ಆಕಸ್ಮಿಕ*" ಎಂದು ವಾದಿಸುತ್ತಾನೆ. ಭಾರತ ದಂಡ ಸಂಹಿತೆ, 1860ನ್ನು ಉಲ್ಲೇಖಿಸಿ ತೀರ್ಮಾನಿಸಿ.

**8.** In a criminal trial, the burden of proof is always on the prosecution. Why? Are there any exceptions? **10 Marks** **10 ಅಂಕಗಳು**

ಅಪರಾಧಿಕ ಅಧಿವಿಚಾರಣೆಯಲ್ಲಿ ರುಜುವಾತಿನ ಭಾರ ಯಾವತ್ತೂ ಅಭಿಯೋಜನೆ ಮೇಲೆ ಇರುತ್ತದೆ. ಯಾಕೆ? ಏನಾದರೂ ಅಪವಾದಗಳಿವೆಯೇ?

**9.** "All murders are culpable homicides, but all culpable homicides are not murders" Discuss. **10 Marks** **10 ಅಂಕಗಳು**

"ಎಲ್ಲಾ ಕೊಲೆಗಳು ಅಪರಾಧಿಕ ನರಹತ್ಯೆಯಾಗಿದೆ, ಆದರೆ ಎಲ್ಲಾ ಅಪರಾಧಿಕ ನರಹತ್ಯೆಗಳು ಕೊಲೆಗಳಾಗುವುದಿಲ್ಲ" ಚರ್ಚಿಸಿ.

**10.** Who is entitled to the benefit under Section 4 of the Probation of Offenders Act, 1958? What are the legal consequences if a person is released on probation? Explain the jurisdiction of the Court to award compensation to the victim under the Probation of Offenders Act, 1958. **10 Marks** 10 ಅಂಕಗಳು

ಅಪರಾಧಿಗಳ ಪರಿವೀಕ್ಷಣ ಅಧಿನಿಯಮ, 1958ರ ಕಲಂ 4ರಡಿಯಲ್ಲಿ ಯಾರು ಪ್ರಯೋಜನ ಪಡೆಯಲು ಅರ್ಹರು? ಯಾವುದೇ ವ್ಯಕ್ತಿಯನ್ನು ಪರೀವೀಕ್ಷಣೆಯಲ್ಲಿ ಬಿಡುಗಡೆ ಮಾಡಿದರೆ ಕಾನೂನಿನ ಪರಿಣಾಮಗಳು ಯಾವುವು? ಅಪರಾಧಿಗಳ ಪರಿವೀಕ್ಷಣ ಅಧಿನಿಯಮ, 1958ರಡಿಯಲ್ಲಿ ಸಂತ್ರಸ್ತರಿಗೆ ಪರಿಹಾರ ನೀಡಲು ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ವಿವರಿಸಿ.

**11.** Explain the power of search, seizure and arrest under Section 42 and 43 of the Narcotic Drugs and Psychotropic Substances Act, 1985. **10 Marks** 10 ಅಂಕಗಳು

ಮಾಧಕ ದ್ರವ್ಯ ಮತ್ತು ಮನೋವಿಕೃತ ವಸ್ತುಗಳ ಅಧಿನಿಯಮ, 1985ರ ಕಲಂ 42 ಮತ್ತು 43ರಡಿಯಲ್ಲಿ ಶೋಧನೆ, ಜಪ್ತಿ ಮತ್ತು ಬಂಧನದ ಅಧಿಕಾರವನ್ನು ವಿವರಿಸಿ.

**12.** Explain the power of a Governor to grant pardons etc., and to suspend, remit or commute the sentence in certain cases. **10 Marks** 10 ಅಂಕಗಳು

ಕೆಲವು ಪ್ರಕರಣಗಳಲ್ಲಿ ಕ್ಷಮಾದಾನ, ಮುಂತಾದವುಗಳನ್ನು ಮಾಡುವುದಕ್ಕೆ, ಶಿಕ್ಷೆಗಳನ್ನು ಅಮಾನತ್ತಿನಲ್ಲಿಡುವುದಕ್ಕೆ, ಮಾಫಿ ಅಥವಾ ಪರಿವರ್ತನೆ ಮಾಡುವುದಕ್ಕೆ ರಾಜ್ಯಪಾಲರಿಗೆ ಇರುವ ಅಧಿಕಾರದ ಬಗ್ಗೆ ವಿವರಿಸಿ.

**13.** Are there any similarities or differences between Section 34 and Section 149 of the Indian Penal Code, 1860? Discuss. **10 Marks** 10 ಅಂಕಗಳು

ಭಾರತ ದಂಡ ಸಂಹಿತೆ, 1860ರ ಕಲಂ 34 ಮತ್ತು ಕಲಂ 149ರ ನಡುವೆ ಯಾವುದಾದರು ಸಮಾನರೂಪತೆ ಅಥವಾ ವ್ಯತ್ಯಾಸಗಳು ಇವೆಯೇ? ಚರ್ಚಿಸಿ.

**14.** Distinguish between Criminal Misappropriation of Property and Criminal Breach of Trust. **10 Marks** 10 ಅಂಕಗಳು

ಅಪರಾಧಿಕ ಸ್ವತ್ತಿನ ದುರುಪಯೋಗ ಮತ್ತು ಅಪರಾಧಿಕ ನಂಬಿಕೆ ದ್ರೋಹದ ನಡುವಿನ ವಿಭಿನ್ನತೆಯನ್ನು ಮಾಡಿರಿ.

-----